ಕನ್ನಡ ಪೋಸ್ಟ್
ಸಂಪಾದಕ : ಮಂಜು ಬನವಾಸೆ
KANNADA POST
ಇದು ಸುದ್ದಿ ವಿಳಾಸ
ಕನ್ನಡ ದಿನಪತ್ರಿಕೆ
ಹಾಸನ
E-mail : kannadapostnews@gmail.com | / ಕನ್ನಡ post | Price: ₹1
Vol.No.02 | Issue. 199 | Pages. 2 | Date: 18-07-2026, SATURDAY | RNI NO: KARKAN/2024/89601 | Kannada Daily
ಸಂಪುಟ : 02 - ಸಂಚಿಕೆ : 199 - ಪುಟಗಳು : 2 | 18-07-2026 ಶನಿವಾರ | Ph: 8762954248 | ದರ : ₹1

# ರೌಡಿ ಶೀಟರ್ ಹತ್ಯೆ ಕೇಸ್: 16 ಆರೋಪಿಗಳ ಬಂಧನ

## ಕೊಲೆಗೆ 12 ವರ್ಷದ ಹಗೆತನ ಕಾರಣ | ರೋಚಕ ಮಾಹಿತಿ ಬಿಚ್ಚಿಟ್ಟ ಎಸ್‌ಪಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಜಿಲ್ಲಾ ನ್ಯಾಯಾಲಯ ಎದುರು ಜೂ. 8ರಂದು ನಡೆದಿದ್ದ ರೌಡಿಶೀಟರ್ ಮಂಜೇಶ್ ಕೊಲೆ ಪ್ರಕರಣ ಸಂಬಂಧ ಒಟ್ಟು 16 ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತಾ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಕೊಲೆಯಾದ ಮಂಜೇಶ್ ಮತ್ತು ಎ1 ಆರೋಪಿ ಪರಮೇಶ್ ಒಂದು ಕಾಲದಲ್ಲಿ ಸ್ನೇಹಿತರು. ಇಬ್ಬರು, ಮತ್ತವರ ಸಹಚರರು, ಒಟ್ಟಾಗಿಯೇ ಅನೇಕ ಕೊಲೆ, ಸುಲಿಗೆ ಇತ್ಯಾದಿ ಅಪರಾಧ ಪ್ರಕರಣದಲ್ಲಿ ಭಾಗಿಯಾಗಿದ್ದರು.

ಆದರೆ 2012 ರಲ್ಲಿ ನಡೆದ ಒಂದು ಕೊಲೆ ನಂತರ ಇಬ್ಬರ ನಡುವೆ ಹಗೆತನ ಬೆಳೆಯಿತು. ವರ್ಷದಿಂದ ವರ್ಷಕ್ಕೆ ಮತ್ಸರ ಬಲಿಯ ತೊಡಗಿತು. ಅದೀಗ ಮಂಜೇಶನ ಕೊಲೆಯಲ್ಲಿ ಅಂತ್ಯವಾಗಿದೆ. ನಿಜವಾದ ಕಾರಣ ಏನು ಎಂಬುದರ ಬಗ್ಗೆ ತನಿಖೆ ಮುಂದುವರಿದಿದೆ ಎಂದು ತಿಳಿಸಿದರು.

16 ಮಂದಿ ಬಂಧನ: ಕಳೆದ ಜೂ.7 ರ ತಡರಾತ್ರಿ ನಡೆದ ಮಂಜೇಶ್ ಕೊಲೆ ಪ್ರಕರಣ ಸಂಬಂಧ ಈವರೆಗೆ 16 ಹಂತಕರನ್ನು ಬಡಾವಣೆ ಪೊಲೀಸರು ಹಾಗೂ ತನಿಖಾ ತಂಡ ಬಂಧಿಸಿದೆ.



ಎ1 ಆರೋಪಿ ಪರಮೇಶ್, ಪುನೀತ್, ಶಶಿಧರ್, ಜಯಂತ್, ರಾಕೇಶ್, ಯಲ್ಲಾಲಿಂಗ, ಸಾಯಿನಾಥ್, ಭರತ್ ಬಿ.ಆರ್., ಆದಿತ್ಯ, ವಿಕಾಸ್ ಎಂ.ಜಿ., ಆಕಾಶ್, ಗಂಗಾಧರ್, ಉಮೇಶ್, ಪ್ರದೀಪ, ಇರ್ಫಾನ್ ಮತ್ತು ಆಯೂಬ್‌ಖಾನ್ ಬಂಧಿತ ಆರೋಪಿಗಳು.

ಬಂಧಿತ ಆರೋಪಿಗಳೆಲ್ಲರೂ ಹಲವು ಅಪರಾದ ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ ಎಂದರು.

### ಮಂಜೇಶ್ ಜೊತೆಗೆ ಓಡಾಟ

ಮಂಜೇಶ್ ಯಾವಾಗ ಬೆಂಗಳೂರಿನಿಂದ ಚಿಕ್ಕಮಗಳೂರಿಗೆ ಗಡಿಪಾರು ಆದನೋ ಆಗಿನಿಂದಲೇ ಈತನನ್ನು ಮುಗಿಸಲು ಪರಮೇಶ್ ಅಂಡ್ ಗ್ಯಾಂಗ್ ಸ್ಕೆಚ್ ಹಾಕಿತ್ತು.

ಮಂಜೇಶನ ಚಲನ-ವಲನ ಗಮನಿಸಲು ಒಬ್ಬನನ್ನು ಚಿಕ್ಕಮಗಳೂರಿನಲ್ಲಿಯೇ ಬಿಟ್ಟಿದ್ದರು.

ಜೂ.7 ರಂದು ಚಿಕ್ಕಮಗಳೂರು ಬಿಟ್ಟು ಬೇರೆ ಕಡೆ ಹೋಗೋಣ ಎಂದು ಬೇರೊಬ್ಬರ ಮೂಲಕ ಕಾಲ್ ಮಾಡಿಸಿದ ಪರಮೇಶ್ ಅಂಡ್ ಟೀ, ಯಾವಾಗ ಮಂಜೇಶ್ ಚಿಕ್ಕಮಗಳೂರಿನಿಂದ ರಾತ್ರಿ 11 ಗಂಟೆಗೆ ಸಾರಿಗೆ ಬಸ್ ಹತ್ತಿದನೋ ಅಲ್ಲಿಂದ ಹಿಂಬಾಲಿಸಿದರು.

ಅದಕ್ಕೂ ಮುನ್ನವೇ ಹಂತಕರ ತಂಡ ಬೆಂಗಳೂರಿನಿಂದ ಕಾಫಿನಾಡಿಗೆ ಬಂದಿತ್ತು. ಅಲ್ಲಿಂದಲೇ ಹಿಂಬಾಲಿಸಿ ಹಾಸನದಲ್ಲಿ ಮಂಜೇಶನ ಜೀವ ತೆಗೆದು ಪರಾರಿಯಾಗಿತ್ತು.

> ಪ್ರಕರಣದ ತನಿಖೆ ಮುಂದುವರಿದಿರುವಾಗಲೇ ಎ1 ಆರೋಪಿ ಪರಮೇಶ್, ಮೈಸೂರಿನ ಸರಸ್ವತಿಪುರಂ ಪೊಲೀಸರ ಠಾಣೆಗೆ ಹಾಜರಾಗಿ ಶರಣಾಗಿದ್ದ. ಅಲ್ಲಿಗೆ ನಮ್ಮ ಪೊಲೀಸರು ತೆರಳಿ ವಶಕ್ಕೆ ಪಡೆದು ವಿಚಾರಣೆಗೆ ಒಳ ಪಡಿಸಿದ್ದೇವೆ. ಕೊಲೆಯ ಹಿಂದೆ ಹಲವು ವಿಷಯಗಳು ತಳುಕು ಹಾಕಿಕೊಂಡಿದ್ದು, ವಿಚಾರಣೆ ಪೂರ್ಣಗೊಂಡ ಎಲ್ಲವೂ ತಿಳಿಯಲಿದೆ.
>
> **- ಶುಭಾನ್ವಿತಾ, ಎಸ್ಪಿ ಹಾಸನ**

ಪರಮೇಶ್ ಮೇಲೆ 4 ಕೊಲೆ ಕೇಸ್ ಸೇರಿದಂತೆ ಬೆಂಗಳೂರಿನ ವಿವಿಧ ಠಾಣೆಗಳಲ್ಲಿ ಒಂದಲ್ಲ ಬರೋಬ್ಬರಿ 14 ಪ್ರಕರಣಗಳಿವೆ. ಎ2 ಪುನೀತ್ ವಿರುದ್ಧ 13 ಕೇಸ್‌ಗಳಿವೆ. ಹಾಗೆಯೇ ಕೊಲೆಯಾದ ಮಂಜೇಶ್ ಮೇಲೂರು 4 ಕೊಲೆ ಕೇಸ್ ಸೇರಿದಂತೆ 8 ಪ್ರಕರಣ ದಾಖಲಾಗಿವೆ ಎಂದು ಮಾಹಿತಿ ನೀಡಿದರು.

ಈ ನಡುವೆ ಮಂಜೇಶ್ ಕಡೆಯಿಂದ ಪರಮೇಶ್ ಮೇಲೆ 3 ಪ್ರಕರಣ ದಾಖಲಾಗಿದ್ದರೆ, ಪರಮೇಶ್ ಕಾರಣದಿಂದ ಮಂಜೇಶ್ ಮೇಲೆ 4 ಪ್ರಕರಣ ದಾಖಲಾಗಿವೆ. ಆರಂಭದಲ್ಲಿ ಸ್ನೇಹಿತರಾಗಿದ್ದವರು ನಂತರ ಶತ್ರುಗಳಾಗಿದ್ದೇಕೆ ಎಂಬ ಬಗ್ಗೆ ತನಿಖೆ ಮುಂದುವರಿದಿದ್ದು, ಬಂಧಿತ ಆರೋಪಿಗಳೆಲ್ಲರೂ ಇನ್ನೂ ಪೊಲೀಸ್ ಕಸ್ಟಡಿಯಲ್ಲೇ ಇದ್ದು ವಿಚಾರಣೆ ಮುಂದುವರಿದಿದೆ ಎಂದರು.

# ಹೆತ್ತ ಮಕ್ಕಳಂತೆ ವಿದ್ಯಾರ್ಥಿಗಳನ್ನು ಪ್ರೀತಿಸಬೇಕು : ಶಿವರಾಮೇಗೌಡ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಶಿಕ್ಷಕರು ಕರ್ತವ್ಯ ಪಥದಲ್ಲಿ ತಮ್ಮಿಂದ ಪಾಠ ಕಲಿಯುವ ಮಕ್ಕಳಿಗೆ ಹೆತ್ತ ಮಕ್ಕಳಿಗಿಂತ ಅಧಿಕವಾಗಿ ಪ್ರೀತಿ ತೋರಿಸಿ ಹೇಳಿಕೊಟ್ಟಾಗ ಮಗು ಚೆನ್ನಾಗಿ ಅಭ್ಯಾಸ ಮಾಡುತ್ತದೆ ಎಂದು ಜಿಲ್ಲಾ ಅನುದಾನ ರಹಿತ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟದ (ಹುಸ್ಮಾ) ಅಧ್ಯಕ್ಷ ಬಿ.ಇ.ಶಿವರಾಮೇಗೌಡ ಹೇಳಿದರು.

ಸಂಸ್ಕೃತ ಸಂಘ ಮತ್ತು ಹುಸ್ಮಾ ವತಿಯಿಂದ ನಗರದ ಸಂಸ್ಕೃತ ಭವನದಲ್ಲಿ ಏರ್ಪಡಿಸಿದ್ದ ಪಾಠ್ಯ ಪೂರಕ ಕಥಾ ಕಥನ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ತನ್ನ ಮಗುವಿಗೆ ತೋರಿದ ಪ್ರೀತಿ ಒಂದು ಮಗುವಿನ ಏಳ್ಗೆಗೆ ಕಾರಣವಾಗುತ್ತದೆ. ಅಧಿಕವಾದರೆ ಅದರಿಂದ ಅಪಾಯವೂ ಇದೆ. ಸಾಮೀಪ್ಯದ ಪ್ರೀತಿ ಭಾವವನ್ನು ಎಲ್ಲರೊಡನೆ ವಿನಿಮಯ ಮಾಡಿದಾಗ ಅದು ಪ್ರತಿಯೊಂದು ಮಗುವಿನ ಶ್ರದ್ಧೆಯ ಕಲಿಕೆಗೆ ತನ್ಮೂಲಕ ದೇಶದ ಏಳ್ಗೆಗೂ ಸಹಕಾರಿಯಾಗುತ್ತದೆ. ಸಮರ್ಥ ಶಿಕ್ಷಕ ರಾಷ್ಟ್ರ ರಕ್ಷಕನಾಗುತ್ತಾನೆಂಬುದರಲ್ಲಿ ಸಂದೇಹವಿಲ್ಲ ಎಂದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಕೃತ ಸಂಘದ ಅಧ್ಯಕ್ಷ ಎಂ.ಎಸ್.ಶ್ರೀಕಂಠಯ್ಯ ಮಾತನಾಡಿ, ಶಿಕ್ಷಕ ವೃತ್ತಿಯು ತತ್ಕಾಲದಲ್ಲಿ ಫಲವನ್ನು ನೀಡದಿದ್ದರೂ ಬಹುಕಾಲದ ನಂತರ ಹಿಂತಿರುಗಿ ನೋಡಿದಾಗ ಸಮರ್ಪಕ ಕಾರ್ಯಕ್ಕೆ ಜೀವರೂಪಿ ಪ್ರತಿಫಲಗಳು ಕಣ್ಮುಂದೆಯೇ ಕಂಡಾಗ ವೃತ್ತಿಯಿಂದ ದೊರೆತ ಸಾರ್ಥಕ್ಯದ ಸಂತೃಪ್ತಿ ಜೀವನಪರ್ಯಂತ ಸಂತಸವನ್ನು ನೀಡುತ್ತದೆ ಎಂದರು.

ಕನ್ನಡ ಮತ್ತು ಸಮಾಜ ವಿಜ್ಞಾನ ಬೋಧಿಸುವ 65 ಶಿಕ್ಷಕರು ಪಾಲ್ಗೊಂಡಿದ್ದರು.

# ಕಡಿಮೆ ಬಡ್ಡಿ ದರದ ಆಮಿಷ: 2 ಕೆ.ಜಿ. ಚಿನ್ನ ಪಡೆದು ವಂಚನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಚಿನ್ನದ ಮೇಲೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಕೊಡಿಸುವುದಾಗಿ ಸಾರ್ವಜನಿಕರಿಗೆ ಆಮಿಷ ಒಡ್ಡಿ, ಅವರಿಂದ ಗಜಲಕ್ಷ್ಮಿ ಗೋಲ್ಡ್ ಫೈನಾನ್ಸ್ ಹೆಸರಿನಲ್ಲಿ ಚಿನ್ನಾಭರಣಗಳನ್ನು ಪಡೆದು ವಂಚನೆ ನಡೆಸಲು ಯತ್ನಿಸಿದ್ದ ಆರೋಪಿಯನ್ನು' ನಗರ ಠಾಣೆ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತಾ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಈ ಪ್ರಕರಣದ ತನಿಖೆಯಲ್ಲಿ ಹಲವು ಮಹತ್ವದ ಮಾಹಿತಿಗಳು ಬೆಳಕಿಗೆ ಬಂದಿದ್ದು, ಸಾರ್ವಜನಿಕರು ಎಚ್ಚರಿಕೆಯಿಂದ ಇರಬೇಕೆಂದು ಮಾಡಿದರು.

ಬಂಧಿತನನ್ನು ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ಮೂಲದ ಮಂಜುನಾಥ್ ಎಂದು ಗುರುತಿಸಲಾಗಿದೆ. ಆರೋಪಿ ಗಜಲಕ್ಷ್ಮಿ ಗೋಲ್ಡ್ ಫೈನಾನ್ಸ್ ಹೆಸರಿನಲ್ಲಿ ಹಣಕಾಸು ವ್ಯವಹಾರ ನಡೆಸುತ್ತಿರುವಂತೆ ನಂಬಿಸಿ ಸಾರ್ವಜನಿಕರ ವಿಶ್ವಾಸ ಗಳಿಸಿದ್ದನು. ಬಳಿಕ ಚಿನ್ನಾಭರಣಗಳನ್ನು ಪಡೆದು ವಿವಿಧ ಬ್ಯಾಂಕ್‌ಗಳಲ್ಲಿ ಅಡವಿಟ್ಟು ಹಣ ಪಡೆಯುವ ಮೂಲಕ ತನ್ನ ಅಕ್ರಮ ಚಟುವಟಿಕೆಗಳನ್ನು ನಡೆಸುತ್ತಿದ್ದ ಎಂದು ತನಿಖೆಯಲ್ಲಿ ಬಹಿರಂಗವಾಗಿದೆ. ಪೊಲೀಸರ ಮಾಹಿತಿ ಪ್ರಕಾರ, ಆರೋಪಿ ಸುಮಾರು 2 ಕೆ.ಜಿ. ಚಿನ್ನಾಭರಣವನ್ನು ಸಂಗ್ರಹಿಸಿ ಹಾಸನ, ಚನ್ನರಾಯಪಟ್ಟಣ ಹಾಗೂ ಗುಂಡ್ಲುಪೇಟೆಯ ವಿವಿಧ ಬ್ಯಾಂಕ್‌ಗಳಲ್ಲಿ ಅಡಮಾನ ಇಟ್ಟಿದ್ದಾನೆ. ಸಾರ್ವಜನಿಕರಿಗೆ ಕೇವಲ ಶೇಕಡ. 5ರ ಬಡ್ಡಿದರದಲ್ಲಿ ಸಾಲ ದೊರೆಯುತ್ತದೆ ಎಂದು ಭರವಸೆ ನೀಡಿ ಅವರ ಚಿನ್ನಾಭರಣಗಳನ್ನು ಪಡೆದುಕೊಂಡಿದ್ದನು. ಕಡಿಮೆ ಬಡ್ಡಿದರದ ಆಮಿಷಕ್ಕೆ ಒಳಗಾದ ಅನೇಕ ಮಂದಿ ಯಾವುದೇ ಅನುಮಾನ ವ್ಯಕ್ತಪಡಿಸದೆ ತಮ್ಮ ಅಮೂಲ್ಯ ಆಭರಣಗಳನ್ನು ಆತನಿಗೆ ಒಪ್ಪಿಸಿದ್ದರು. ಪ್ರಕರಣ ಬೆಳಕಿಗೆ ಬಂದ ತಕ್ಷಣ ಪೊಲೀಸರು ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿ, ಅಡವಿಟ್ಟಿದ್ದ ಚಿನ್ನಾಭರಣಗಳ ಬಗ್ಗೆ ಮಾಹಿತಿ ಸಂಗ್ರಹಿಸಿದ್ದಾರೆ. ತನಿಖೆಯಲ್ಲಿ ಒಟ್ಟು 139 ಮಂದಿ ತಮ್ಮ ಚಿನ್ನಾಭರಣವನ್ನು ಆರೋಪಿಗೆ ನೀಡಿರುವುದು ದೃಢಪಟ್ಟಿದೆ. ಪೊಲೀಸ್ ಇಲಾಖೆಯ ಕ್ರಮದಿಂದ ಈಗಾಗಲೇ 97 ಮಂದಿ ತಮ್ಮ ಚಿನ್ನಾಭರಣವನ್ನು ಮರಳಿ ಪಡೆದಿದ್ದು, ಉಳಿದ 42 ಮಂದಿ ಇನ್ನೂ ತಮ್ಮ ಆಭರಣಗಳನ್ನು ವಾಪಸ್ ಪಡೆಯಬೇಕಿದೆ ಎಂದು ಹೇಳಿದರು.

# ಜು.19 ರಂದು ಪ್ರತಿಭಾ ಪುರಸ್ಕಾರ-ಆರೋಗ್ಯ ತಪಾಸಣಾ ಶಿಬಿರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹಾಸನ ಜಿಲ್ಲಾ ನೇಕಾರ ಕುರುಹಿನ ಶೆಟ್ಟಿ ಪತ್ತಿನ ಸಹಕಾರ ಸಂಘದ 13ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆ ಜುಲೈ 19 ರಂದು ನಡೆಯಲಿದೆ. ಅಂದು ಬೆಳಿಗ್ಗೆ 11.30ಕ್ಕೆ ನಗರದ ರವೀಂದ್ರನಗರದಲ್ಲಿರುವ ಜಿಲ್ಲಾ ಕುರುಹಿನ ಶೆಟ್ಟಿ ಭವನದಲ್ಲಿ ನಡೆಯಲಿದೆ ಎಂದು ಸಂಘದ ಕೃಷ್ಣಶೆಟ್ಟಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

2014-15ನೇ ಸಾಲಿನಲ್ಲಿ ಸ್ಥಾಪನೆಯಾದ ನಮ್ಮ ಸಂಘವು ಜಿಲ್ಲೆಯ ಕುರುಹಿನ ಶೆಟ್ಟಿ ಸಮಾಜದ ಏಕೈಕ ಪತ್ತಿನ ಸಹಕಾರ ಸಂಘವಾಗಿದ್ದು, ಕಳೆದ 12 ವರ್ಷಗಳಿಂದ ನಿರಂತರವಾಗಿ ಲಾಭ ಗಳಿಸುತ್ತಾ ಯಶಸ್ವಿಯಾಗಿ 13ನೇ ವರ್ಷಕ್ಕೆ ಕಾಲಿಟ್ಟಿದೆ ಎಂದು ಹೇಳಿದರು.

2025-26ನೇ ಸಾಲಿನಲ್ಲಿ ಸಂಘವು 4,71,964 ರೂ. ನಿವ್ವಳ ಆದಾಯ ಗಳಿಸಿದೆ. ಪ್ರಸ್ತುತ ಸಂಘದಲ್ಲಿ 401 ಮಂದಿ ಷೇರುದಾರರಿದ್ದು, 9 ಲಕ್ಷ ಷೇರು ಬಂಡವಾಳ ಸಂಗ್ರಹಿಸಲಾಗಿದೆ.

ಇದೇ ಅವಧಿಯಲ್ಲಿ 40.62 ಲಕ್ಷ ಹೂಡಿಕೆ ಮಾಡಲಾಗಿದ್ದು, 1.10 ಕೋಟಿ ಸಾಲ ವಿತರಿಸಲಾಗಿದೆ. ಸಂಘದ ಒಟ್ಟು ದುಡಿಯುವ ಬಂಡವಾಳ 2.29 ಕೋಟಿಯಾಗಿದ್ದು, ಆರಂಭದಿಂದಲೂ ಪ್ರತಿವರ್ಷ ಸದಸ್ಯರಿಗೆ ಶೇ.10ರಷ್ಟು ಲಾಭಾಂಶ ವಿತರಿಸಲಾಗುತ್ತಿದೆ ಎಂದು ವಿವರಿಸಿದರು.




ಕಳೆದ ವರ್ಷದಿಂದ ರಾಜ್ಯದಲ್ಲೇ ಅಪರೂಪದ ವಿಶೇಷ ಕಾರ್ಯಕ್ರಮವಾಗಿ ಕುರುಹಿನ ಶೆಟ್ಟಿ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುವ ಕಾರ್ಯಕ್ರಮವನ್ನು ಸಂಘ ಆಯೋಜಿಸುತ್ತಾ ಬಂದಿದೆ. ಜಿಲ್ಲೆಯ ಕುರುಹಿನ ಶೆಟ್ಟಿ ಸಮಾಜದ ಸ್ನಾತಕ, ಸ್ನಾತಕೋತ್ತರ ಹಾಗೂ ವೃತ್ತಿಪರ ಕೋರ್ಸ್‌ಗಳಲ್ಲಿ ಉತ್ತಮ ಸಾಧನೆ ಮಾಡಿರುವ ವಿದ್ಯಾರ್ಥಿಗಳನ್ನು ಗುರುತಿಸಿ ಈ ಬಾರಿ ಸನ್ಮಾನಿಸಲಾಗುವುದು ಎಂದರು.

2026ನೇ ಸಾಲಿಗೆ 28 ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದು, ಎಲ್ಲರಿಗೂ ಮಾಜಿ ಶಾಸಕ ಪ್ರೀತಂ ಜೆ.ಗೌಡ ಅವರು ಪ್ರತಿಭಾ ಪುರಸ್ಕಾರ ಮಾಡಿ ಅಭಿನಂದಿಸಲಿದ್ದಾರೆ ಎಂದು ತಿಳಿಸಿದರು.

ಹಾಗೆಯೇ ಸಂಘದ ಸದಸ್ಯರು ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ಇಂಡಿಯಾನ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಸಹಯೋಗದಲ್ಲಿ ಜುಲೈ 19ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1ರವರೆಗೆ ಜಿಲ್ಲಾ ಕುರುಹಿನ ಶೆಟ್ಟಿ ಭವನದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ.

ಸಾರ್ವಜನಿಕರು ಹಾಗೂ ಸದಸ್ಯರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಮನವಿ ಮಾಡಿದರು.

ಸಂಘದಲ್ಲಿ ಆರಂಭಿಸಿರುವ ಔದಾರ್ಯ ನಿಧಿಯ ಮೂಲಕ ನಿಧನರಾದ ಸದಸ್ಯರ ಕುಟುಂಬಗಳಿಗೆ ಸಹಾಯಧನ ನೀಡಲಾಗುತ್ತಿದೆ.

ಐದು ಮಂದಿ ಪಿಗ್ಮಿ ಏಜೆಂಟರ ಮೂಲಕ ಪ್ರತಿದಿನ ಸುಮಾರು 50 ಸಾವಿರ ಉಳಿತಾಯ ಸಂಗ್ರಹಿಸಲಾಗುತ್ತಿದೆ.

ಪ್ರತಿ ವರ್ಷ ಸದಸ್ಯರಿಗೆ ಆಕರ್ಷಕ ಬಹು ಬಣ್ಣದ ಕ್ಯಾಲೆಂಡರ್‌ಗಳನ್ನು ವಿತರಿಸಲಾಗುತ್ತಿದ್ದು, ಗೃಹಸಾಲ, ನಿವೇಶನ ಸಾಲ, ವಾಹನ ಸಾಲ ಹಾಗೂ ವೈಯಕ್ತಿಕ ಸಾಲ ಸೇರಿದಂತೆ ವಿವಿಧ ಹಣಕಾಸು ಸೌಲಭ್ಯಗಳನ್ನು ಸಂಘದಿಂದ ಒದಗಿಸಲಾಗುತ್ತಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ತಿಮ್ಮರಾಯಶೆಟ್ಟಿ, ಚಂದ್ರಶೇಖರ್, ನಾರಾಯಣ್‌ಶೆಟ್ಟಿ, ಹೇಮಂತ್ ಕುಮಾರ್, ಬಾಲಕೃಷ್ಣ ಮೊದಲಾದವರಿದ್ದರು.

# ಹಾಸನದಲ್ಲಿ ತೆರವು ಕಾರ್ಯಾಚರಣೆ ಮುಂದುವರಿಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸುಗಮ ಸಂಚಾರ ಹಾಗೂ ಪಾದಚಾರಿಗಳ ಸುರಕ್ಷತೆ ಕಾಪಾಡುವ ಉದ್ದೇಶದಿಂದ ಹಾಸನ ಮಹಾನಗರ ಪಾಲಿಕೆ ವತಿಯಿಂದ ಪಾದಚಾರಿ ಮಾರ್ಗಗಳನ್ನು ಅತಿಕ್ರಮಿಸಿ ವ್ಯಾಪಾರ, ವಹಿವಾಟು ನಡೆಸುತ್ತಿದ್ದ ಗೂಡಂಗಡಿ, ತಳ್ಳುವಗಾಡಿ ಹಾಗೂ ತಾತ್ಕಾಲಿಕ ವ್ಯಾಪಾರ ಮಳಿಗೆಗಳ ತೆರವು ಕಾರ್ಯಾಚರಣೆ ಮುಂದುವರಿದಿದೆ.

ಕಳೆದ ಹಲವು ವರ್ಷಗಳಿಂದ ಪಾದಚಾರಿ ಮಾರ್ಗ ಅತಿಕ್ರಮಣದಿಂದ ಒಂದೆಡೆ ಪಾರ್ಕಿಂಗ್ ಸಮಸ್ಯೆ, ಮತ್ತೊಂದೆಡೆ ಪಾದಚಾರಿಗಳು ರಸ್ತೆ ಮೇಲೆಯೇ ಸಂಚರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು. ಇದರಿಂದ ವಾಹನ ದಟ್ಟಣೆ ಹೆಚ್ಚಾದಂತೆ ವಿವಿಧ ರೀತಿಯ ಅಪಘಾತ ಪ್ರಮಾಣವೂ ಹೆಚ್ಚಿದ್ದವು. ಶಾಲಾ ಮಕ್ಕಳು, ಹಿರಿಯ ನಾಗರಿಕರು, ಮಹಿಳೆಯರು ಹಾಗೂ ವಿಶೇಷ ಚೇತನರು ಸುಗಮವಾಗಿ ಸಾಗಲು ಒಂದು ರೀತಿಯಲ್ಲಿ ಅಡೆತಡೆ ಆಗಿತ್ತು.

ಇದನ್ನು ಮನಗಂಡ ಜಿಲ್ಲಾಡಳಿತ



ಮತ್ತು ಪಾಲಿಕೆ ಅಧಿಕಾರಿಗಳು ಯೋಜಿತ ರೀತಿಯಲ್ಲಿ ಅತಿಕ್ರಮಣ ತೆರವು ಕಾರ್ಯಾಚರಣೆ ಕೈಗೊಂಡಿದ್ದು, ರಸ್ತೆ ಮತ್ತು ಪಾದಚಾರಿ ಮಾರ್ಗ ಮುಕ್ತಗೊಳಿಸುವ ಕೆಲಸ ಮುಂದುವರಿಸಿದ್ದಾರೆ. ಆದರೆ, ಪಾಲಿಕೆಯ ಈ ಕ್ರಮದಿಂದ ಇದೇ ವ್ಯಾಪಾರ ನಂಬಿ ಜೀವನ ಸಾಗಿಸುತ್ತಿರುವ ಸಣ್ಣ ವ್ಯಾಪಾರಿಗಳಿಗೆ ಸಂಕಷ್ಟ ಎದುರಾಗಿದೆ. ಈ ಹಿನ್ನೆಲೆ ಅವರಿಗೆ ಸೂಕ್ತ ಸ್ಥಳದಲ್ಲಿ ಪರ್ಯಾಯ ವ್ಯಾಪಾರ ವಲಯ ಸೃಷ್ಟಿಸಿಕೊಡಬೇಕು ಎಂಬ ಒತ್ತಾಯ ಕೇಳಿಬಂದಿದೆ. ಈಗಾಗಲೇ ಜಿಲ್ಲಾಡಳಿತ ನೀಡಿರುವ ಭರವಸೆಯನ್ನು ಶೀಘ್ರ ಈಡೇರಿಸಬೇಕು ಎಂದು ವ್ಯಾಪಾರಿಗಳು ಮನವಿ ಮಾಡುತ್ತಿದ್ದಾರೆ.

ಹಾಗೆಯೇ ನಗರದ ಸೌಂದರ್ಯ ಹಾಳುಮಾಡುವ ಹಾಗೂ ಪಾದಚಾರಿ ಮಾರ್ಗಗಳನ್ನು ಅತಿಕ್ರಮಿಸುವ ಜಾಹೀರಾತು ಫಲಕಗಳು, ಅನಧಿಕೃತ ನಾಮಫಲಕಗಳು ಮತ್ತು ದೊಡ್ಡ ಗಾತ್ರದ ಬೋರ್ಡ್‌ಗಳನ್ನು ತೆರವುಗೊಳಿಸಬೇಕು ಎಂದು ಜನರು ಆಗ್ರಹಿಸಿದ್ದಾರೆ.ಈ ವೇಳೆ ಮಾತನಾಡಿದ ಅಧಿಕಾರಿಗಳು, ಸಾರ್ವಜನಿಕರು ರಸ್ತೆ ಹಾಗೂ ಪಾದಚಾರಿ ಮಾರ್ಗಗಳಲ್ಲಿ ಎಲ್ಲೆಂದರಲ್ಲಿ ವಾಹನ ನಿಲ್ಲಿಸಬಾರದು. ಪಾರ್ಕಿಂಗ್ ನಿಯಮಗಳನ್ನು ಪಾಲಿಸುವ ಮೂಲಕ ಜಿಲ್ಲಾಡಳಿತಕ್ಕೆ ಸಹಕಾರ ನೀಡಿದರೆ ಮಾತ್ರ ನಗರದಲ್ಲಿ ಶಾಶ್ವತ ಸಂಚಾರ ವ್ಯವಸ್ಥೆ ಸಾಧ್ಯವಾಗುತ್ತದೆ ಎಂದರು.

ನಗರದ ಅಭಿವೃದ್ಧಿ ಎಂದರೆ ಕೇವಲ ರಸ್ತೆ ನಿರ್ಮಾಣವಲ್ಲ,ಸಾರ್ವಜನಿಕರಿಗೆ ಸುರಕ್ಷಿತ, ಸ್ವಚ್ಛ ಮತ್ತು ವ್ಯವಸ್ಥಿತ ವಾತಾವರಣ ಕಲ್ಪಿಸುವುದೂ ಆಗಿದೆ. ಅತಿಕ್ರಮಣ ತೆರವು ಕಾರ್ಯಾಚರಣೆ ನಿರಂತರವಾಗಿ ಮುಂದುವರಿಯಬೇಕು. ಹಾಗೆಯೇ ಜೀವನೋಪಾಯ ಕಳೆದುಕೊಳ್ಳುತ್ತಿರುವ ಸಣ್ಣ ವ್ಯಾಪಾರಿಗಳ ಹಿತವನ್ನೂ ಕಾಪಾಡಬೇಕು ಎಂಬ ಕೂಗು ಕೇಳಿ ಬಂದಿದೆ.

ಈ ಸಣ್ಣ ವ್ಯಾಪಾರಸ್ಥರು, ಗೂಡಂಗಡಿ ತೆರವುಗೊಂಡ ಹಿನ್ನಲೆಯಲ್ಲಿ ದೊಡ್ಡ ಅಂಗಡಿ, ಹೋಟೆಲ್ ವ್ಯಾಪಾರ ಸೇರಿದಂತೆ ಇತರೆ ವ್ಯಾಪಾರದಲ್ಲಿ ಏರಿಕೆ ಕಂಡಿದೆ. ಒಂದೆಡೆಯಾದರೆ, ಇನ್ನೊಂದು ಕಡೆ ದಿನನಿತ್ಯ ಸಣ್ಣ ವ್ಯಾಪಾರ ಮಾಡಿಕೊಂಡು ಜೀವನ ಮಾಡುತ್ತಿದ್ದ ವ್ಯಾಪಾರಸ್ಥರ ಬಾಳು ಹೇಳ ತೀರದು. ಇವರಿಗೆ ಪರ್ಯಾಯ ವ್ಯವಸ್ಥೆ ಮಾಡಿಕೊಡಲಿ ಎಂಬುದು ಸಾರ್ವಜನಿಕರ ಒತ್ತಾಯವಾಗಿದೆ.

# ಫಸಲ್ ಭಿಮಾ ನೋಂದಣಿಗೆ ಶಾಸಕ ಸಿಮೆಂಟ್ ಮಂಜು ಕರೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲ್ಲೂಕಿನ ಎಲ್ಲಾ ರೈತರು ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆಯಡಿ ತಮ್ಮ ಬೆಳೆಗಳಿಗೆ ಜು. 31ರ ಒಳಗೆ ನೋಂದಣಿ ಮಾಡಿಸಿಕೊಳ್ಳಬೇಕು ಎಂದು ಶಾಸಕ ಸಿಮೆಂಟ್ ಮಂಜು ಮನವಿ ಮಾಡಿದರು.

ಪಟ್ಟಣದ ಕೃಷಿ ಇಲಾಖೆ ಆವರಣದಲ್ಲಿ ಏರ್ಪಡಿಸಿದ್ದ ಫಸಲ್ ಭೀಮಾ ಯೋಜನೆ ಕುರಿತು ಅರಿವು ಮೂಡಿಸುವ ಜಾಗೃತಿ ವಾಹನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಹವಾಮಾನ ವೈಪರೀತ್ಯ ಹಾಗೂ ಮಳೆ ಕೊರತೆಯಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಪ್ರಕೃತಿ ವಿಕೋಪ, ಅತಿವೃಷ್ಟಿ, ಅನಾವೃಷ್ಟಿ ಸೇರಿ ವಿವಿಧ ಕಾರಣಗಳಿಂದ ಬೆಳೆ ಹಾನಿಯಾದರೆ ರೈತರಿಗೆ ಆರ್ಥಿಕ ಭದ್ರತೆ ಒದಗಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಈ ಯೋಜನೆ ಜಾರಿಗೆ ತಂದಿದೆ. ರೈತರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.



ಆಲೂರು ಹಾಗೂ ಕಟ್ಟಾಯ ಭಾಗದಲ್ಲಿ ಹೆಚ್ಚಾಗಿ ಬೆಳೆಯುವ ಅಡಿಕೆ, ಕಾಳುಮೆಣಸು, ಭತ್ತ, ಜೋಳ ಸೇರಿ ವಿವಿಧ ಬೆಳೆಗಳಿಗೆ ಯೋಜನೆಯಡಿ ವಿಮಾ ಸೌಲಭ್ಯ ಲಭ್ಯವಿದೆ. ಬೆಳೆ ಹಾನಿಯ ಪ್ರಮಾಣಕ್ಕೆ ಅನುಗುಣವಾಗಿ ರೈತರಿಗೆ ಪರಿಹಾರ ದೊರೆಯಲಿದ್ದು, ಅಡಿಕೆಗೆ ಸುಮಾರು 1.60 ಲಕ್ಷ ರೂ., ಕಾಳುಮೆಣಸಿಗೆ 47 ಸಾವಿರ ರೂ., ಭತ್ತಕ್ಕೆ 75 ಸಾವಿರ ರೂ., ಹಾಗು ಜೋಳಕ್ಕೆ 44 ಸಾವಿರ ರೂ. ವರೆಗೆ ವಿಮಾ ರಕ್ಷಣೆ ದೊರೆಯುತ್ತದೆ ಎಂದು ತಿಳಿಸಿದರು.

ಈ ವರ್ಷ ಮುಂಗಾರು ಮಳೆ ಶೇ.40ಕ್ಕೂ ಅಧಿಕ ಪ್ರಮಾಣದಲ್ಲಿ ಕೊರತೆಯಾಗಿರುವುದು ರೈತರಲ್ಲಿ ಆತಂಕ ಮೂಡಿಸಿದೆ. ಇಂತಹ ಸಂದರ್ಭದಲ್ಲಿ ಬೆಳೆಗಳನ್ನು ರಕ್ಷಿಸಿಕೊಳ್ಳಲು ವಿಮೆ ಅಗತ್ಯವಾಗಿದ್ದು, ಪ್ರತಿಯೊಬ್ಬ ರೈತರೂ ಜು. 31ರೊಳಗೆ ವಿಮಾ ಕಂತು ಪಾವತಿಸಿ ಯೋಜನೆಯ ವ್ಯಾಪ್ತಿಗೆ ಬರಬೇಕೆಂದು ಮನವಿ ಮಾಡಿದರು.

ಯೋಜನೆಯಡಿ ವಿವಿಧ ಬೆಳೆಗಳಿಗೆ ನಿಗದಿತ ಪ್ರೀಮಿಯಂ ಪಾವತಿಸಿ ಹೆಚ್ಚಿನ ಮೊತ್ತದ ವಿಮಾ ರಕ್ಷಣೆ ಪಡೆಯಲು ಅವಕಾಶವಿದೆ. ರೈತರು ತಮ್ಮ ಬೆಳೆಗೆ ಅನ್ವಯವಾಗುವ ಪ್ರೀಮಿಯಂ ಹಾಗು ವಿಮಾ ಮೊತ್ತದ ಕುರಿತು ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆ ಅಧಿಕಾರಿಗಳನ್ನು ಸಂಪರ್ಕಿಸಿ ಮಾಹಿತಿ ಪಡೆದು ತಕ್ಷಣವೇ ನೋಂದಣಿ ಮಾಡಿಸಿಕೊಳ್ಳಬೇಕೆಂದು ಹೇಳಿದರು.

ಗ್ರಾಮಾಂತರ ಪ್ರದೇಶಗಳಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ವಿಶೇಷ ಪ್ರಚಾರ ವಾಹನ ಪ್ರತಿಯೊಂದು ಹಳ್ಳಿಗೂ ಭೇಟಿ ನೀಡಿ ರೈತರಿಗೆ ಯೋಜನೆಯ ಮಾಹಿತಿ ನೀಡಲಿದೆ. ಯಾವುದೇ ರೈತರು ಈ ಅವಕಾಶವನ್ನು ಕೈಚೆಲ್ಲದೆ ಫಸಲ್ ಭೀಮಾ ಯೋಜನೆಯ ಪ್ರಯೋಜನ ಪಡೆದು ತಮ್ಮ ಕೃಷಿಗೆ ಆರ್ಥಿಕ ಭದ್ರತೆ ಒದಗಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಪ್ರಭಾಕರ್ ಮತ್ತಿತರರಿದ್ದರು.

# ರಾಜ್ಯ ಸರ್ಕಾರದ ವಿರುದ್ಧ ರೈತ ಸಂಘದಿಂದ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮುಂಗಾರು ಮಳೆ ಕೊರತೆ, ಬೆಳೆಗಳಿಗೆ ರೋಗಬಾಧೆಯಿಂದ ಅನ್ನದಾತರು ಸಂಕಷ್ಟ ಎದುರಿಸುತ್ತಿದ್ದರೂ ಪರಿಹಾರ ಕ್ರಮ ಕೈಗೊಳ್ಳದೆ ರಾಜ್ಯ ಸರ್ಕಾರ ಸಂಪೂರ್ಣ ನಿರ್ಲಕ್ಷ್ಯ ವಹಿಸುತ್ತಿದೆ ಎಂದು ಆರೋಪಿಸಿ ರಾಜ್ಯ ರೈತ ಸಂಘ-ರೈತ ಶಕ್ತಿ ಬಣದ ಕಾರ್ಯಕರ್ತರು ಗುರುವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು.

ಹೇಮಾವತಿ ಪ್ರತಿಮೆಯಿಂದ ಮೆರವಣಿಗೆಯಲ್ಲಿ ಬಂದ ಪ್ರತಿಭಟನಾಕಾರರು ಎನ್.ಆರ್.ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರ ವಿರುದ್ಧ ಧಿಕ್ಕಾರ ಕೂಗಿದರು. ನಂತರ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ನಡೆಸಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು.

ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡು ಒಂದು ತಿಂಗಳು ಕಳೆದಿದ್ದರೂ ಇನ್ನೂ ಕೃಷಿ ಸಚಿವರ ನೇಮಕ ಮಾಡಿಲ್ಲ. ಈ ಅವಧಿಯಲ್ಲಿ ರಸಗೊಬ್ಬರ, ಬಿತ್ತನೆ ಬೀಜ, ಕಾಲುವೆಗಳಿಗೆ ನೀರು ಹರಿಸುವುದು ಸೇರಿ ಕೃಷಿ ಇಲಾಖೆಗೆ ಕಾರ್ಯಭಾರ ಹೆಚ್ಚಿರುತ್ತದೆ. ಯಾರೂ ಜವಾಬ್ದಾರಿ ವಹಿಸಿಕೊಳ್ಳದ ಹಿನ್ನೆಲೆಯಲ್ಲಿ ಅಧಿಕಾರಿಗಳದ್ದೇ ಕಾರುಬಾರು ನಡೆಯುತ್ತಿದೆ ಎಂದು ಆರೋಪಿಸಿದರು.



ರೈತರಿಂದ ಬೆಂಬಲ ಬೆಲೆಯಡಿ ರಾಗಿ ಖರೀದಿಸಿ 3 ತಿಂಗಳಾದರೂ ಹಣ ಪಾವತಿಯಾಗಿಲ್ಲ. ನೆರೆ ಹಾವಳಿಗೆ ತುತ್ತಾದ ತೆಂಗಿನ ಮರ ಹಾಗೂ ಅಡಿಕೆ ಬೆಳೆಗೆ ಒಂದು ವರ್ಷವಾದರೂ ಪರಿಹಾರ ಸಿಕ್ಕಿಲ್ಲ. ಮೆಕ್ಕೆಜೋಳ ಬೆಳೆ ಬಿಳಿಸುಳಿ ರೋಗದಿಂದ ಸಂಪೂರ್ಣ ಹಾನಿಗೀಡಾಗಿದ್ದು ಸರ್ವೆ ನಡೆಸಿ ಪರಿಹಾರ ನೀಡುವಲ್ಲಿ ಆಡಳಿತ ವಿಫಲವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾದರೆ ರಾಜ್ಯದ ಜನರಿಗೆ ಒಳ್ಳೆಯದಾಗುತ್ತದೆಂಬ ನಿರೀಕ್ಷೆ ಇತ್ತು. ಆದರೆ ಟೌನ್‌ಶಿಪ್ ನಿರ್ಮಾಣದ ಹೆಸರಿನಲ್ಲಿ ಬಿಡದಿಯ ನೂರಾರು ಎಕರೆ ಸ್ವಾಧೀನಕ್ಕೆ ಮುಂದಾಗುವ ಮೂಲಕ ಅನ್ನದಾತರ ಶಾಪಕ್ಕೆ ಗುರಿಯಾಗುತ್ತಿದ್ದಾರೆ.

ದೇವನಹಳ್ಳಿ, ಬಿಡದಿ ಬಳಿಕ ಹಾಸನದ ಜಮೀನಿಗೂ ಕನ್ನ ಹಾಕಿದ್ದಾರೆ. ಕೃಷಿಕರಿಗೆ ಅನುಕೂಲ ಮಾಡಿಕೊಡಬೇಕಿರುವ ಸರ್ಕಾರ ಅನ್ನದಾತರನ್ನೇ ಬೀದಿಗೆ ತಳ್ಳುತ್ತಿರುವುದು ಖಂಡನೀಯ ಎಂದರು.

ಸಂಘದ ರಾಜ್ಯಾಧ್ಯಕ್ಷ ದಯಾನಂದ ನಾಗೇನಹಳ್ಳಿ, ಮಹಿಳಾ ಘಟಕದ ಅಧ್ಯಕ್ಷೆ ಹೇಮಾ, ಯುವ ಘಟಕದ ಅಧ್ಯಕ್ಷ ನಿತಿನ್ ಗೌಡ, ಜಂಟಿ ಕಾರ್ಯದರ್ಶಿ ಲೋಕೇಶ್ ಕೆರೆಕೋಡಿಹಳ್ಳಿ ಮತ್ತಿತರರಿದ್ದರು.

### ಸಭೆ ನಡೆಸದ ಉಸ್ತುವಾರಿ ಸಚಿವರು

ಹಾಸನಕ್ಕೆ ತಾತ್ಕಾಲಿಕ ಉಸ್ತುವಾರಿ ಸಚಿವರನ್ನಾಗಿ ಕೃಷ್ಣಬೈರೇಗೌಡ ಅವರನ್ನು ನೇಮಕ ಮಾಡಲಾಗಿದೆ. ಆದರೆ ಅವರು ಜಿಲ್ಲೆಗೆ ಭೇಟಿ ನೀಡಿಲ್ಲ. ಮಳೆ ಕೊರತೆಯಿಂದ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಎದುರಾಗಿದೆ. ಮೇವಿಲ್ಲದೆ ಜಾನುವಾರುಗಳು ತೊಂದರೆಗೀಡಾಗಿವೆ. ಕೆರೆಕಟ್ಟೆ, ಜಲಾಶಯಗಳಲ್ಲಿ ನೀರಿಲ್ಲದೆ ಬತ್ತಿವೆ. ಇಂತಹ ಸಂದರ್ಭದಲ್ಲಿ ಸ್ಥಳಕ್ಕೆ ಭೇಟಿ ನೀಡಿ ಜನರಿಗೆ ಧೈರ್ಯ ಹೇಳಬೇಕಿದ್ದ ಸಚಿವರು ಬೆಂಗಳೂರಿನಲ್ಲಿ ಫುಟ್‌ಪಾತ್ ತೆರವು ಕಾರ್ಯಾಚರಣೆಗಷ್ಟೇ ಸೀಮಿತರಾಗಿದ್ದಾರೆ. ತಕ್ಷಣವೇ ಜಿಲ್ಲೆಯ ರೈತರ ಸಮಸ್ಯೆಗೆ ಸ್ಪಂದಿಸದಿದ್ದರೆ ಹೋರಾಟ ತೀವ್ರಗೊಳಿಸಲಾಗುವುದೆಂದು ಎಚ್ಚರಿಕೆ ನೀಡಿದರು.

# ಬಾಣಾವರ ಗ್ರಾ.ಪಂ.ನಲ್ಲಿ ಕೋಟ್ಯಂತರ ರೂ. ಭ್ರಷ್ಟಾಚಾರ: ಆರೋಪ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅರಸೀಕೆರೆ ತಾಲ್ಲೂಕು ಬಾಣಾವರದಲ್ಲಿ ಗ್ರಾಮ ಪಂಚಾಯಿತಿಗೆ ಸೇರಿದ 200ಕ್ಕೂ ಅಧಿಕ ನಿವೇಶನಗಳನ್ನು ಅಕ್ರಮವಾಗಿ ಬೇರೆಯವರಿಗೆ ಖಾತೆ ಮಾಡಿಕೊಡಲಾಗಿದ್ದು ಸಮಗ್ರ ತನಿಖೆ ಮೂಲಕ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆ ತಾಲ್ಲೂಕು ಗೌರವಾಧ್ಯಕ್ಷ ಲಕ್ಷ್ಮೀಶ್ ಒತ್ತಾಯಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಾಣಾವರ ಗ್ರಾಮ ಪಂಚಾಯಿತಿಯಿಂದ ಪಟ್ಟಣ ಪಂಚಾತಿಯಾಗಿ ಮೇಲ್ದರ್ಜೆಗೇರಿದ ಅವಧಿಯಲ್ಲಿ ಭ್ರಷ್ಟಾಚಾರ ನಡೆದಿದೆ. ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾಗಿದ್ದ ಕುಮಾರಸ್ವಾಮಿ, ಮಣಿಕಂಠ ಹಾಗು ಧರ್ಮೇಂದ್ರ ಎಂಬುವವರು ಅಕ್ರಮ ಎಸಗಿದ್ದು ಸರ್ಕಾರಕ್ಕೆ ಸುಮಾರು 20 ಕೋಟಿ ರೂ. ನಷ್ಟವುಂಟಾಗಿದೆ ಎಂದರು.

ಈ ಸಂಬಂಧ ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿಗೆ ಲಿಖಿತ ದೂರು ನೀಡಿದ್ದರೂ ಕ್ರಮ ಜರುಗಿಸಲಿಲ್ಲ. 2000-01ರಲ್ಲಿ ಜಿಲ್ಲಾ ಪಂಚಾಯಿತಿ ರದ್ದುಪಡಿಸಿದ್ದ 110 ನಿವೇಶನಗಳನ್ನು ಈಗ ವಾಮಮಾರ್ಗದ ಮೂಲಕ ಬೇಕಾದವರಿಗೆ ಖಾತೆ ಮಾಡಿಕೊಡಲಾಗಿದೆ. ಹಾಗೆಯೇ ಸರಿಯಾಗಿ ಕರ ವಸೂಲಿ ಮಾಡಿಲ್ಲ. ಗ್ರಾಮ ಠಾಣಾ, ಖಾಲಿ ಜಾಗ, ಸ್ಮಶಾನ, ಕೆರೆ ಹೀಗೆ ಸರ್ಕಾರಿ ಆಸ್ತಿಯನ್ನು ನಕಲಿ ದಾಖಲೆ ಸೃಷ್ಟಿಸಿ ಬೇರೊಬ್ಬರಿಗೆ ಪರಭಾರೆ ಮಾಡಲಾಗಿದೆಯೆಂದರು.

ಪ್ರಕರಣದ ಸಮಗ್ರ ತನಿಖೆ ನಡೆಸಿದರೆ ಅನೇಕ ಅಧಿಕಾರಿಗಳು ಜೈಲಿಗೆ ಹೋಗುವುದು ಖಚಿತ. ಈಗ ಇರುವ ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಶುಭಂ ಶುಕ್ಲಾ ಅವರು ಈ ಕಡೆಗೆ ಗಮನ ಹರಿಸಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಸದಸ್ಯ ಧರ್ಮಣ್ಣ, ಸೋಮಶೇಖರ್, ಮಲ್ಲಿಕಾರ್ಜುನ, ಕೋಟಪ್ಪ, ಪ್ಯಾರಿಜಾನ್, ದಾದಾಪೀರ್, ಬೀರಪ್ಪ ಹಾಜರಿದ್ದರು.

# ಗವೇನಹಳ್ಳಿ ಪಿಎಸಿಎಸ್: ಶಾಸಕರ ಅವಹೇಳನ ಖಂಡನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಾಲ್ಲೂಕಿನ ಗವೇನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಅವಿರೋಧ ಆಯ್ಕೆ ನಡೆದಿದ್ದರೂ ಶಾಸಕ ಹೆಚ್.ಪಿ.ಸ್ವರೂಪ್ ಅವರನ್ನು ಭೇಟಿಯಾಗಿರುವುದಕ್ಕೆ ರಾಜಕೀಯ ಲೇಪನ ಬೆರೆಸಿ ಅವಹೇಳನ ಮಾಡುವುದು ಸರಿಯಲ್ಲ. ಸಂಘದ ಏಳಿಗೆಗೆ ಶಾಸಕರ ಸಹಕಾರ-ಸಲಹೆ ಬೇಕಾಗುತ್ತದೆಂದು ಸಂಘದ ಅಧ್ಯಕ್ಷ ಹರೀಶ್ ಸ್ಪಷ್ಟಪಡಿಸಿದರು.




ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 11 ನಿರ್ದೇಶಕ ಸ್ಥಾನದ ಸಂಘಕ್ಕೆ ಇತ್ತೀಚೆಗೆ ಚುನಾವಣೆ ಪ್ರಕ್ರಿಯೆ ನಡೆಯಿತು. ಗ್ರಾಮದಲ್ಲಿ ಎಲ್ಲರೂ ಒಟ್ಟಾಗಿರಬೇಕೆಂಬ ಉದ್ದೇಶದಿಂದ ಸಹಮತದಿಂದ ಅವಿರೋಧ ಆಯ್ಕೆ ನಡೆದಿದೆ. ನಾನು ಮೊದಲಿನಿಂದಲೂ ಜೆಡಿಎಸ್ ಕಾರ್ಯಕರ್ತ. ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವ ಬಾಲಕೃಷ್ಣ ಹಾಗೂ ಬೆಂಬಲಿಗರು ಶಾಸಕ ಹೆಚ್.ಪಿ.ಸ್ವರೂಪ್ ಕುರಿತು ಅವಹೇಳನಕಾರಿಯಾಗಿ ಮಾತನಾಡುತ್ತಿದ್ದಾರೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ರಾಜಕೀಯ ಬೆರೆಸುವುದು ಬೇಡವೆಂದು ಮೊದಲೇ ನಿರ್ಧಾರಕ್ಕೆ ಬರಲಾಗಿತ್ತು. ಆದರೆ ಮಾಜಿ ಶಾಸಕರ ಬೆಂಬಲಿಗರು ಹಾಗೂ ಫ್ಯಾನ್ಸ್ ಪೇಜ್‌ನಲ್ಲಿ ಶಾಸಕ ಹೆಚ್.ಪಿ.ಸ್ವರೂಪ್ ಅವರ ಬಗ್ಗೆ ಅವಹೇಳನಕಾರಿ ಪೋಸ್ಟರ್‌ಗಳನ್ನು ಹಂಚುತ್ತಿದ್ದಾರೆ.

ನಾವು ಸಂಘಕ್ಕೆ ಅನುದಾನ ಕೊಡಿಸುವ ಉದ್ದೇಶದಿಂದ ಶಾಸಕರನ್ನು ಭೇಟಿಯಾದರೆ, ಅದರಲ್ಲೂ ರಾಜಕೀಯ ಹುಡುಕುವುದು ಸರಿಯಲ್ಲ ಎಂದರು.

ನಿರ್ದೇಶಕ ಲಿಂಗರಾಜ ಮಾತನಾಡಿ, ಸಂಘದ 9 ನಿರ್ದೇಶಕರು ಜೆಡಿಎಸ್ ಬೆಂಬಲಿತರಾಗಿ ಗೆದ್ದಿರುವ ಕಾರಣ ಸಂಘದ ಅಧ್ಯಕ್ಷರನ್ನು ಜೆಡಿಎಸ್ ಬೆಂಬಲಿತರೆಂದು ಘೋಷಣೆ ಮಾಡಿದ್ದೇವೆ ಎಂದರು.

ಪಕ್ಷಾತೀತವಾಗಿ ಅಧ್ಯಕ್ಷ-ಉಪಾಧ್ಯಕ್ಷರನ್ನು ಆಯ್ಕೆ ಮಾಡಿರುವುದು ನಿಜ. ಊರಿನಲ್ಲಿ ಪರಸ್ಪರ ಕಿತ್ತಾಡುವುದು ಬೇಡವೆಂದು ಹೀಗೆ ಮಾಡಿದೆವು.

ಸಂಘಕ್ಕೆ ಅನುದಾನ ಬರಬೇಕು ಅಂದರೆ ಶಾಸಕರನ್ನು ಭೇಟಿ ಮಾಡಬೇಕು. ಅದಕ್ಕೆ ಅಪಾರ್ಥ ಕಲ್ಪಿಸುವುದು ಸರಿಯಲ್ಲವೆಂದರು.

ಸುದ್ದಿಗೋಷ್ಠಿಯಲ್ಲಿ ನಿರ್ದೇಶಕರಾದ, ಶಿವರಾಮು, ಸೋಮಶೇಖರ್, ಜಯಮ್ಮ, ಜವರಮ್ಮ ಮಂಜುಳಾ, ಹೊನ್ನೇಗೌಡ ಇದ್ದರು.

# ಮೌಲ್ಯಾಧಾರಿತ ಶಿಕ್ಷಣಕ್ಕೆ ಶ್ರೀ ಸತ್ಯಸಾಯಿ ಗುರುಕುಲ ಪ್ರೇರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಖಾಸಗಿ ಶಾಲೆಗಳ ಪೈಪೋಟಿಯ ನಡುವೆ ಶಿಕ್ಷಣವನ್ನು ವ್ಯಾಪಾರವನ್ನಾಗಿಸದೆ ಮೌಲ್ಯಾಧಾರಿತ ಶಿಕ್ಷಣದ ಮೂಲಕ ಗ್ರಾಮೀಣ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಕಾರ್ಯದಲ್ಲಿ ಬೇಲೂರು ತಾಲ್ಲೂಕಿನ ಇಬ್ಬೀಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚನ್ನೇನಹಳ್ಳಿಯ ಶ್ರೀ ಸತ್ಯಸಾಯಿ ಸತ್ಯನಿಕೇತನಂ ಗುರುಕುಲ ಗುರುತಿಸಿಕೊಂಡಿದೆ.



2016ರಲ್ಲಿ ಆರಂಭವಾದ ಈ ಗುರುಕುಲವು ಕಳೆದ ಹತ್ತು ವರ್ಷಗಳಿಂದ ಗ್ರಾಮೀಣ ಬಡ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ, ವಸತಿ, ಊಟ ಹಾಗು ಅಗತ್ಯ ಸೌಲಭ್ಯಗಳನ್ನು ಒದಗಿಸುತ್ತಿದೆ. ಇದುವರೆಗೆ 438ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಅವಕಾಶ ಕಲ್ಪಿಸಿರುವ ಸಂಸ್ಥೆಯಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ 125 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ, ಪೋಷಕರ ಒಪ್ಪಿಗೆ ಪಡೆದು 6 ರಿಂದ 10ನೇ ತರಗತಿವರೆಗೆ ಉಚಿತ ಶಿಕ್ಷಣ ನೀಡಲಾಗುತ್ತಿದೆ. ವಿದ್ಯಾರ್ಥಿಗಳಿಗೆ ಸಮವಸ್ತ್ರ, ಪುಸ್ತಕ, ವಸತಿ, ಪೌಷ್ಟಿಕ ಆಹಾರ ಸೇರಿ ಎಲ್ಲಾ ಸೌಲಭ್ಯಗಳನ್ನು ಯಾವ ಶುಲ್ಕವಿಲ್ಲದೆ ಒದಗಿಸಲಾಗುತ್ತಿದೆ.

ಪಠ್ಯ ಶಿಕ್ಷಣದ ಜೊತೆಗೆ ಸಮಾಜ ಸೇವೆ, ಪರಿಸರ ಸಂರಕ್ಷಣೆ, ಕೃಷಿ, ವೇದಉಪನಿಷತ್ತುಗಳ ಅಧ್ಯಯನ, ರಾಮಾಯಣಮಹಾಭಾರತದ ಮೌಲ್ಯಗಳು, ಕ್ರೀಡೆ ಹಾಗು ಸಾಂಸ್ಕೃತಿಕ ಚಟುವಟಿಕೆಗಳಿಗೂ ಸಮಾನ ಆದ್ಯತೆ ನೀಡಲಾಗುತ್ತಿದೆ. ವಿದ್ಯಾರ್ಥಿಗಳ ಆಸಕ್ತಿ ಹಾಗು ಸಾಮರ್ಥ್ಯಕ್ಕೆ ತಕ್ಕಂತೆ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ವಾತಾವರಣವನ್ನು ಗುರುಕುಲದಲ್ಲಿ ನಿರ್ಮಿಸಲಾಗಿದೆ.

ಗುರುಕುಲದ ಸರ್ವತೋಮುಖ ಅಭಿವೃದ್ಧಿಗೆ ಸಮಾಜದ ದಾನಿಗಳ ಸಹಕಾರ ಮಹತ್ವದ್ದಾಗಿದ್ದು, ಅವರ ಬೆಂಬಲದಿಂದಲೇ ಈ ಸೇವಾ ಕಾರ್ಯ ನಿರಂತರವಾಗಿ ನಡೆಯುತ್ತಿದೆ ಎಂದು ಗುರುಕುಲದ ಅಧ್ಯಕ್ಷ ನವೀನ್ ಕುಮಾರ್ ಅವರು ತಿಳಿಸಿದ್ದಾರೆ.

ಸಂಸ್ಥೆಯ ಸ್ಥಾಪಕರಾದ ಮಡಿಯಾಲ ನಾರಾಯಣಭಟ್ಟರ ದೂರದೃಷ್ಟಿಯ ಫಲವಾಗಿ ಆರಂಭವಾದ ಗುರುಕುಲವು, ನಂತರ ಸದ್ಗುರು ಮಧುಸೂದನ ಸಾಯಿ ಅವರ ಮಾರ್ಗದರ್ಶನದಲ್ಲಿ ಮತ್ತಷ್ಟು ವಿಸ್ತಾರಗೊಂಡಿದೆ. ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಇಂತಹ ಗುರುಕುಲಗಳನ್ನು ಸ್ಥಾಪಿಸಿ ಗ್ರಾಮೀಣ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡುವ ಸಂಕಲ್ಪ ಹೊಂದಿರುವುದಾಗಿ ಸಂಸ್ಥೆ ತಿಳಿಸಿದೆ.

ಗುರುಕುಲದಲ್ಲಿ ಜಾತಿ, ಧರ್ಮ, ಭಾಷೆ ಅಥವಾ ವರ್ಗಭೇದವಿಲ್ಲದೆ ಎಲ್ಲಾ ವಿದ್ಯಾರ್ಥಿಗಳಿಗೆ ಸಮಾನ ಅವಕಾಶ ಕಲ್ಪಿಸಲಾಗುತ್ತಿದೆ. ರಾಜ್ಯ ಸರ್ಕಾರದ ಕ್ಷೀರಭಾಗ್ಯ ಯೋಜನೆಗೆ ಪೂರಕವಾಗಿ ವಿದ್ಯಾರ್ಥಿಗಳಿಗೆ ರಾಗಿ ಮಾಲ್ಟ್ ಅನ್ನು ಉಚಿತವಾಗಿ ನೀಡಲಾಗುತ್ತಿದೆ. ಆಧುನಿಕ ಶಿಕ್ಷಣದೊಂದಿಗೆ ಭಾರತೀಯ ಸಂಸ್ಕೃತಿ, ಆಧ್ಯಾತ್ಮಿಕ ಮೌಲ್ಯಹಾಗು ಮಾನವೀಯತೆಯನ್ನು ಬೆಳೆಸುವ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಲಾಗಿದೆ ಎಂದು ಸಂಸ್ಥೆಯ ಮಾಧ್ಯಮ ಕಾರ್ಯದರ್ಶಿ ಬಿ.ಕೆ. ಗಣೇಶ್ ತಿಳಿಸಿದ್ದಾರೆ.

# ಎಸ್. ಜಾನಕಿ ನಿಧನಕ್ಕೆ ಅರಸೀಕೆರೆಯಲ್ಲಿ ಸಂತಾಪ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಸುಮಧುರ ಕಂಠದ ಮೂಲಕ ಕೋಟ್ಯಾಂತರ ಅಭಿಮಾನಿಗಳ ಮನೆಗೆದ್ದಿದ್ದ ಗಾನ ಕೋಗಿಲೆ ಎಸ್.ಜಾನಕಿ ಅವರು ದೈಹಿಕವಾಗಿ ನಮ್ಮೊಂದಿಗೆ ಇಲ್ಲದಿದ್ದರೂ ಅವರು ಹಾಡಿರುವ ಗೀತೆಗಳ ಮೂಲಕ ಅಮರರಾಗಿದ್ದಾರೆ ಎಂದು ಜಿಲ್ಲಾ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ರವಿ ನಾಕಲಗೂಡು ಹೇಳಿದರು.

ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ಹಾಗೂ ಕನ್ನಡ ಜಾನಪದ ಪರಿಷತ್ ತಾಲೂಕು ಘಟಕದಿಂದ ಆಯೋಜಿಸಿದ್ದ ಗಾನ ಕೋಗಿಲೆ ಎಸ್.ಜಾನಕಿ ಅವರ ನುಡಿ ನಮನ ಹಾಗೂ ಗಾಯನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಲಾವಿದನಿಗೆ ಸಾವಿದೆ ಕಲೆಗೆ ಸಾವಿಲ್ಲ ತನ್ನ ಕಲೆಯ ಮೂಲಕವೇ ಕಲಾವಿದ ಸತ್ತ ನಂತರವೂ ಬದುಕಿರುತ್ತಾನೆ. ಅಂತಹ ಮಹಾನ್ ಕಲಾವಿದೆ ಎಸ್.ಜಾನಕಿ ಎಂದರು.

ಕೇಂದ್ರ ಕನ್ನಡ ಸಾಹಿತ್ಯವೇದಿಕೆ ತಾಲೂಕು ಅಧ್ಯಕ್ಷ ಕೆ.ಎಸ್.ಮಂಜುನಾಥ್ ಮಾತನಾಡಿ, ಜಾನಕಿ ಅವರು ಆಂಧ್ರ ಪ್ರದೇಶದವರದರೂ ಕನ್ನಡ ಭಾಷೆ ಮತ್ತು ಭಾವದ ಬಗ್ಗೆ ಅವರಿಗಿದ್ದ ಅಗಾಧ ಪ್ರೇಮದಿಂದಾಗಿ ಅವರ ಕಂಠದಿಂದ ಸಾವಿರಾರು ಭಾವಗೀತೆ, ಭಕ್ತಿಗೀತೆ ಹಾಗೂ ಚಲನಚಿತ್ರ ಗೀತೆಗಳು ನಿರಾಳವಾಗಿ ಹರಿದು ಬಂದವು. ಅಂತಹ ಕಲಾವಿದೆ ನಮ್ಮನ್ನು ಅಗಲಿರುವುದು ಗಾಯನ ಕ್ಷೇತ್ರಕ್ಕೆ ತುಂಬಲಾರದ ನಷ್ಟ ಎಂದು ಕಂಬನಿ ಮಿಡಿದರು.



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ವಿಧಾನಸಭಾ ಕ್ಷೇತ್ರದ ರಾಮನಾಥಪುರದ ಸೆಸ್ಕ್ ಕಚೇರಿಯಲ್ಲಿ ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ಪಿ. ಶ್ರೀಧರ್ ಗೌಡ ಅಧ್ಯಕ್ಷತೆಯಲ್ಲಿ ಗೃಹಜ್ಯೋತಿ ಯೋಜನೆಯ ಪರಿಷ್ಕರಣೆ ಮತ್ತು ಪ್ರಗತಿ ಪರಿಶೀಲನಾ ಸಭೆ ನಡೆಯಿತು.

## ಇತಿಹಾಸದಲ್ಲಿ ಈ ದಿನ

### ಜುಲೈ-18

1947: ಭಾರತ ಸ್ವಾತಂತ್ರ್ಯ ಕಾಯ್ದೆಗೆ ಬ್ರಿಟನ್‌ನ ರಾಜ ಜಾರ್ಜ್ ಆರನೇ ಅವರ ಅನುಮೋದನೆ ದೊರೆಯಿತು. ಇದರಿಂದ ಭಾರತ ಮತ್ತು ಪಾಕಿಸ್ತಾನದ ಸ್ವಾತಂತ್ರ್ಯಕ್ಕೆ ಕಾನೂನುಬದ್ಧ ಮಾರ್ಗ ಸಿದ್ಧವಾಯಿತು.

1968: ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ಇಂಟೆಲ್ ಸಂಸ್ಥೆ ಸ್ಥಾಪನೆಯಾಯಿತು.

1980: ಭಾರತದ ಮೊದಲ ಉಪಗ್ರಹ ಉಡಾವಣಾ ವಾಹನ ಎಸ್‌ಎಲ್‌ವಿ-3 ಯಶಸ್ವಿಯಾಗಿ ರೋಹಿಣಿ (-1) ಉಪಗ್ರಹವನ್ನು ಕಕ್ಷೆಗೆ ಸೇರಿಸಿತು. ಇದು ಭಾರತದ ಬಾಹ್ಯಾಕಾಶ ಕ್ಷೇತ್ರದ ಐತಿಹಾಸಿಕ ಸಾಧನೆಯಾಯಿತು.

**ಜನನ**

1918: ನೆಲ್ಸನ್ ಮಂಡೇಲಾ, ದಕ್ಷಿಣ ಆಫ್ರಿಕಾದ ಮಾಜಿ ರಾಷ್ಟ್ರಪತಿ ಹಾಗೂ ನೋಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತ

1931: ಖುರ್ಶೀದ್ ಆಲಂ ಖಾನ್, ಭಾರತದ ಹಿರಿಯ ರಾಜಕಾರಣಿ ಮತ್ತು ಮಾಜಿ ಕೇಂದ್ರ ಸಚಿವ

**ನಿಧನ**

2012: ರಾಜೇಶ್ ಖನ್ನಾ, ಹಿಂದಿ ಚಿತ್ರರಂಗದ ಮೊದಲ ಸೂಪರ್ ಸ್ಟಾರ್

# ಮೀಟ್ ಮಿಸ್ಟರ್ ಗಜ್‌ರಾಜ್ – 3

**ಧನಂಜಯ ಜೀವಾಳ ಬಿ.ಕೆ.**

**ಗ್ರಾಮಾಯಣ-23**

ನಾವು ಮೂವರೂ ನಿಂತಲ್ಲೇ ದಿಗ್ಮೂಢರಾದೆವು. ಏನೋ ಮಾಡಲು ಹೋಗಿ ಇನ್ನೇನೋ ಆಯ್ತಲ್ಲ ಇದು ಅಂದ್ಕೊಂಡು, ಸ್ವಲ್ಪ ಸಮಯ ಮಾತನಾಡದೇ ಟಾರ್ಚಿನ ಬೆಳಕನ್ನು ರಂಗಸ್ವಾಮಿ ತೂರಿ ಹೋದ ದಿಕ್ಕಿನಲ್ಲಿ ಅಡ್ಡಾದಿಡ್ಡಿ ಹರಿಸಿದೆ. ಆ ಕೊರಕಲಿನಿಂದ ಯಾವುದೇ ಪ್ರತಿಕ್ರಿಯೆ ಇಲ್ಲ. 'ಕೂವ್' ಎಂದು ಕೂಗಿದೆ, ಅಲ್ಲೆಲ್ಲೋ ಕುಳಿತಿದ್ದ ಪಕ್ಷಿಗಳು ಮತ್ತೆ ಕುಳಿತಲ್ಲಿಂದ ಹಾರಿ ಜಲ್ ಜಲ್ ಸದ್ದು ಮಾಡಿ ಹಾರಿ ಮತ್ತೆಲ್ಲೋ ಕುಳಿತವು. ರಂಗಸ್ವಾಮಿಯ ಸದ್ದಿಲ್ಲ. ಮತ್ತೆ ಮೂರ್ಸೆಲ್ಲಿನ ಬ್ಯಾಟರಿಯ ಬೆಳಕು ಪ್ರಪಾತದ ಬುಡದಿಂದ ಆಗಸದೆತ್ತರಕ್ಕೆ ಬೆಳೆದಿದ್ದ ಆದರೆ ನಾವು ನಿಂತಿದ್ದ ಸ್ಥಳಕ್ಕಿಂತಲೂ ಕೆಳಗಿದ್ದ ಕ್ಯಾನೋಪಿಯ ರೆಂಬೆಕೊಂಬೆಗಳ ಸಂದಿಗಳ ಮೂಲಕ ಕಣಿವೆಯೊಳಗೆ ಇಳಿದವು. ಕೆಳಗಿನಿಂದ ಯಾವುದೇ ಪ್ರತಿಕ್ರಿಯೆಯಿಲ್ಲ. ಗಾಬರಿಗೊಂಡ ನಾನು ಏನೋ ಅನಾಹುತವಾಗಿದೆ ಎಂದುಕೊಂಡು ವಿನಯ್, ಸತೀಶ್ ಇಬ್ಬರಿಗೂ ಇರುವಲ್ಲೇ ನಿಲ್ಲುವಂತೆ ಹೇಳಿ ರಂಗಸ್ವಾಮಿ ಕೊರಕಲೊಳಗೆ ಇಳಿದಿದ್ದ ಹಾದಿಯಲ್ಲೇ ಎಚ್ಚರಿಕೆಯಿಂದ ಇಳಿಯತೊಡಗಿದೆ. ಕೊಂಚ ದೂರ ಇಳಿದ ನಂತರ ''ಇಂತಾ ಇರುಕಟ್ಟಿನಲ್ಲಿ ರಂಗಸ್ವಾಮಿಯನ್ನು ಇಳಿಸಬಾರದಿತ್ತು, ಅದೂ ಟಾರ್ಚ್ ಇಲ್ಲದೇ'' ಎಂದೆನಿಸಿತು. ಗಿಡದ ರೆಂಬೆಯೊಂದು ಸಿಗಿದು ಕಿತ್ತು ಕಾಣೆಯಾಗಿತ್ತು. ಓ, ಇದೇ ರೆಂಬೆಯನ್ನು ಆಧಾರಕ್ಕೆ ಹಿಡಿದುಕೊಂಡಿದ್ದ ರಂಗಸ್ವಾಮಿ ಆ ಗಲಿಬಿಲಿಯಲ್ಲಿ ಹತೋಟಿತಪ್ಪಿದ್ದಾನೆ, ಕಾಲುಜಾರಿದಾಗ ಈ ರೆಂಬೆಗೆ ಜೋತುಬಿದ್ದಿದ್ದವನು ರೆಂಬೆ ಹಿಸಿದು ಕಮರಿಯೊಳಗೆ ಜಾರಿಹೋಗಿದ್ದಾನೆ ಎಂದು ಖಚಿತವಾಯಿತು.

ಈಗ ನಾನು ನಿಂತಿದ್ದ ಸ್ಥಳದಿಂದ ಸ್ವಲ್ಪ ಕೆಳಗಿನ ಜಾಗ ಮರಗಳ ರೆಂಬೆ ಕೊಂಬೆಯಿಲ್ಲದೇ ಬೆಳಕು ಹರಿಸಲು ಪೂರಕವಾಗಿತ್ತು. ''ರಂಗಸ್ವಾಮೀ, ರಂಗಸ್ವಾಮೀ'' ಎಂದು ಕೂಗಿದೆ. ''ಅಂ, ಆ.....'' ಎಂದು ಕೊರಗುವ ದನಿಯ ಪ್ರತಿಕ್ರಿಯೆ ಅಲ್ಲೆಲ್ಲೋ ಆಳದಿಂದ ಕೇಳಿಬಂತು, ಅದ್ಯಾವ ಶಕ್ತಿ ಬಂದಿತ್ತೋ, ಹಿಂದೆಂದೋ ಏರಿಳಿದು ಪರಿಚಿತವಾದ ಕೊರಕಲೇನೋ ಎಂಬಂತೆ ಲಗುಬಗೆಯಿಂದ ಸರಸರನೆ ಇಳಿದು, ಮತ್ತೆ ''ರಂಗಸ್ವಾಮೀ, ರಂಗಸ್ವಾಮೀ'' ಎಂದೆ. ಕೊಂಚ ಕೆಳಗಿನಿಂದ 'ಇಲ್ಲಿದೀನಿ' ಎಂ ಮಾತು ಕೇಳಿಬಂತು.

ರಟ್ಟೆ ಗಾತ್ರದ ಕಾಡು ಬೀಳುಗಳ ಬಲೆಯೊಳಗೆ ಒಂದು ಕಾಲನ್ನು ಸಿಕ್ಕಿಸಿಕೊಂಡು, ಇನ್ನೊಂದು ಕೈಯಿಂದ ಯಾವುದೋ ಮರದ ರೆಂಬೆತುದಿಯ ಸೊಪ್ಪನ್ನು ಆಸರೆಗೆಂಬಂತೆ ಹಿಡಿದುಕೊಂಡು ಮೇಲೂ ಬರಲಾಗದೇ ಕೆಳಗೂ ಇಳಿಯಲಾರದೇ, ಏನನ್ನೂ ನೋಡಲಾಗದೆ, ಕತ್ತಲೆಯಲ್ಲಿ ಮಾರನೇ ದಿನ ಬೆಳಕಾಗುವುದನ್ನೇ ಕಾಯುತ್ತಾ ಇರುವವನಂತೆ ತೇಲುತ್ತಾ, ತ್ರಿಶಂಕು ಸ್ಥಿತಿಯಲ್ಲಿ ಸಣ್ಣಗೆ ನಡುಗುತ್ತಾ ಇದ್ದ. ಟಾರ್ಚಿನ ಬೆಳಕನ್ನು ಕಂಡಕೂಡಲೇ ಹಾಗೂ ನನ್ನ ದನಿ ಕೇಳಿ ಸ್ವಲ್ಪ ಧೈರ್ಯ ಪಡೆದುಕೊಂಡ ರಂಗಸ್ವಾಮಿ, ಇತ್ತ ಬಳ್ಳಿಯಿಂದ ಕಾಲನ್ನು ಬಿಡಿಸಿಕೊಂಡರೆ ಕೈಯ್ಯಲ್ಲಿರುವ ರೆಂಬೆ ಅವನ ಭಾರ ತಡೆಯಲಾರದೆ ಹಿಸಿದುಕೊಂಡು ಅಲ್ಲಿಂದ ಕನಿಷ್ಠ ಅರವತ್ತು ಅಡಿ ಆಳದ ಕಮರಿಯೊಳಗೆ ಮತ್ತೆ ಎರಡನೇ ಹಂತದ ಬೀಳುವ ಪ್ರೋಗ್ರಾಂಗೆ ಆಹ್ವಾನ ನೀಡಿದಂತಾಗುತಿತ್ತು. ರೆಂಬೆಯನ್ನು ಕೈಬಿಟ್ಟರೆ ಈ ಕಾಡುಬೀಳು ಇವನ ತೂಕಕ್ಕೆ ಈಗ ಇರುವ ಪೊಸಿಷನ್‌ನಿಂದ ಮತ್ತೆ ಎತ್ತಲೋ ಜೀಕಿಕೊಂಡು ಅಲ್ಲಿಂದ ಇಳಿಯಲು ಸಾಧ್ಯವೇ ಇಲ್ಲದ ಪರಿಸ್ಥಿತಿ ನಿರ್ಮಾಣವಾಗುತಿತ್ತು. ಈಗಿರುವುದೊಂದೇ ದಾರಿ; ಆ ಬೀಳನ್ನು ಅದು ಇರುವ ಸ್ಥಾನದಲ್ಲೇ ಇರುವಂತೆ ಮಾಡಿ ರಂಗಸ್ವಾಮಿಯನ್ನು ಕೆಳಗಿಳಿಸುವುದು. 'ಕತ್ತಿ ಎಲ್ಲಿ' ಎಂದು ರಂಗಸ್ವಾಮಿಯ ಕೇಳಿದೆ. ''ಜಾರಿ ಬೀಳುವಾಗ ಕತ್ತಿ ಕೈಯಿಂದ ಎಗರಿಹೋಯ್ತು, ಎಲ್ಲಿ ಬಿತ್ತೋ ಗೊತ್ತಾಗಲಿಲ್ಲ'' ಎಂದ. ಆತ ಜಾರಿದ ಸ್ಥಳದಿಂದ ಈಗಿರುವವರೆಗೂ ಬೆಳಕು ಹರಿಸಿದೆ. ಆ ಪೊದೆಗಳು, ಮುಳ್ಳುಕಂಟಿಗಳ ನಡುವೆ ಆ ಎಲೆಗಳ ಅಡಿ ಆ ಕತ್ತಿಯನ್ನು ಪತ್ತೆ ಮಾಡಲು ಸಾಧ್ಯವಿರಲಿಲ್ಲ. ಅರ್ಧ ಅಡಿಗೂ ಹೆಚ್ಚು ದಪ್ಪನಾಗಿ ಮರಗಳ ಎಲೆಗಳ ರಾಶಿ ಬಿದ್ದಿತ್ತು. ನಿಂತಿದ್ದ ಸ್ಥಳದಿಂದ ಕೆಳಗಿನ ಕೊರಕಲಿನೆಡೆಗೆ ಬೆಳಕು ಹರಿಸಿದೆ ಸುಮಾರು ಮೂವತ್ನಲವತ್ತಡಿ ಕೆಳಗೆ ಕತ್ತಿಯ ಅಲಗಿನ ಅಂಚು ಫಳಕ್ಕೆಂದು ಬೆಳಕನ್ನು ಪ್ರತಿಫಲಿಸಿತು. ಅಂತೂ ಸಿಕ್ಕಿತಲ್ಲ ಎಂದುಕೊಂಡು ಕಡಿದಾಗಿದ್ದ ಆ ಸ್ಥಳವನ್ನು ಬಲು ಕಷ್ಟದಿಂದ ಕ್ರಮಿಸಿದವನೇ ಶಾಶ್ವತವಾಗಿ ಆ ಕಾಡಿನಲ್ಲಿ ಮಣ್ಣಾಗಬೇಕಿದ್ದ ಮೊಳದುದ್ದದ ಬೀಸುಗತ್ತಿಯನ್ನು ಕೈಗೆ ತೆಗೆದುಕೊಂಡೆ.

ತಲೆಯೆತ್ತಿ ಮೇಲೆ ನೋಡುತ್ತೀನಿ, ರಂಗಸ್ವಾಮಿ ಅತ್ತ ಮರಮೂ ಅಲ್ಲದ ಇತ್ತ ನೆಲಮೂ ಅಲ್ಲದ ನರವಾನರ ಪೊಸಿಷನ್ನಿನಲ್ಲಿ ಒಂದೇ ಕಾಲಿನಲ್ಲಿ ತಲೆಕೆಳಗಾಗಿ ನೇತಾಡುತಿದ್ದಾನೆ. ''ಕಾಲನ್ನು ನಿಧಾನವಾಗಿ ಬಿಡಿಸಿಕೊಂಡು ಹಾಗೇ ಆ ಬೀಳನ್ನು ಹಿಡಿದುಕೊಂಡು ಇಳಿಯಲು ಸಾಧ್ಯವಾ ನೋಡು'' ಎಂದೆ. ಹೇಗಾದರೂ ಬಿಡಿಸಿಕೊಳ್ಳಬಹುದು ಆದರೆ ಆ ಬೀಳು ಮತ್ತು ಅದು ಸುತ್ತಿಕೊಂಡಿದ್ದ ಮರದ ಸುತ್ತಲೂ ಅಭೇದ್ಯವಾದ ಬೆತ್ತದ ಮುಳ್ಳಿನ ಕೋಟೆಯೇ ಇತ್ತು. ಅಷ್ಟರಲ್ಲಿ ''ಕೂ......'' ಎಂಬ ಕೂಗು ಮೇಲಿನಿಂದ ಕೇಳಿಬಂತು. ಅದು ವಿನಯ್‌ನ ದನಿ ಎಂಬುದು ಖಚಿತವಾಗಿ ಗೊತ್ತಾಯಿತು. ''ಇರೀ ಇರೀ, ಅಲ್ಲೇ ಇರಿ, ರಂಗಸ್ವಾಮಿ ಸಿಕ್ಕಿದಾನೆ, ಕರ್ಕೊಂಡು ಬರ್ತಿದೀನಿ'' ಎಂದು ಕೂಗಿ ಹೇಳಿದೆ. ಆ ಮರ ಅಥವಾ ಆ ಬಳ್ಳಿಯ ಮೂಲಕವಾಗಲೀ ನೆಲಕ್ಕಿಳಿಯಲು ಸಾಧ್ಯವೇ ಇರಲಿಲ್ಲ, ಕೈಯಲ್ಲಿ ಕತ್ತಿ ಇರುವಾಗ ಹೊಸ ಪ್ರಯೋಗಗಳಿಗೆ ಅವಕಾಶವಿರುತ್ತದಾದ್ದರಿಂದ ಅಲ್ಲಿದ್ದ ನಿಡಿದಾದ ಗಿಡಮೊಂದನ್ನು ಬುಡಕ್ಕೆ ಕಡಿದುಕೊಂಡೆ. ಒಂದು ತುದಿಯಲ್ಲಿ ಕೊಕ್ಕೆಯಂತಿದ್ದ ಸುಮಾರು ಇಪ್ಪತ್ತಡಿಯುದ್ದದ ತೆಳುವಾದ ಆ ಕೋಲನ್ನು ಬಳಸಿ ರಂಗಸ್ವಾಮಿ ನೇತುಹಾಕಿಕೊಂಡಿದ್ದ ಸುರುಳಿ ಸುರುಳಿಯಾಕಾರದ ಬಳ್ಳಿಯ ಒಂದು ಕವಲನ್ನು ಸಿಕ್ಕಿಸಿಕೊಂಡು ನನ್ನೆಡೆಗೆ ಎಳೆಯಲಾರಂಬಿಸಿದೆ. ಎರಡು ಮೂರು ಬಾರಿ ನನ್ನೆಡೆಗೆ ಉಯ್ಯಾಲೆಯಂತೆ ಜೀಕಿ ತೂಗಿದಾಗ ಆತ ಸಿಕ್ಕಿ ಹಾಕಿಕೊಂಡಿದ್ದ ಬೀಳೂ ಸಹಾ ಒಂದು ಸಾಧಾರಣ ಗಾತ್ರದ ಮರದೆಡೆಗೆ ವಾಲಲಾರಂಬಿಸಿತು. ಹತ್ತಾರು ಬಾರಿ ತೂಗಾಡಿದ ನಂತರ ರಂಗಸ್ವಾಮಿ ಲಬಕ್ಕನೇ ಆ ಮರವನ್ನು ತಬ್ಬಿಕೊಂಡ. ಹಾಗೆ ತಬ್ಬಿಕೊಂಡಾಗ ಆ ಸಾಧಾರಣ ಗಾತ್ರದ ಮರ ಆತನೆಡೆಗೆ ಬಾಗಲಾರಂಬಿಸಿತು. ಮರವನ್ನು ತಬ್ಬಿಕೊಂಡಂತೆಯೇ ಸಿಕ್ಕಿಹಾಕಿಕೊಂಡಿದ್ದ ತನ್ನ ಕಾಲನ್ನು ಬೀಳಿನಿಂದ ಪ್ರಯಾಸದಿಂದ ಬಿಡಿಸಿಕೊಂಡು, ಬದುಕಿದೆಯಾ ಬಡಜೀವವೇ ಎಂದುಕೊಂಡು ಈ ಮರದಿಂದ ಸರಸರನೆ ಕೆಳಗಿಳಿದ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201
and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248